ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೬೬೬ (೧೬೯೦)

ಸದಸ್ಯರ ಹೆಸರು :ಶ್ರೀ ದ್ರುವನಾರಾಯಣ(ಪಂತಾಮರಶ್ರೀ)

ಉತ್ತರಿಸುವ ಸಚಿವರು :ಶ್ರೀ ಬಾಲಚಂದ್ರ ಲ.ಜಾರಕಿಹೊಳಿ

(ಸಮಾಜ ಕಲ್ಯಾಣ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಸರ್ಕಾರಿ ಗುತ್ತಿಗೆಯಲ್ಲಿ ಹಾಗೂ ಕಚೇರಿಗಳಿಗೆ ನರಕುಗಳ ಪೂರೈಕೆಯಲ್ಲಿ ಗುತ್ತಿಗೆ ನೀಡಲು ಹಾಗೂ ಎರವಲು ಸೇವೆ ನಡೆದು ಕೊಳ್ಳುವಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಶೇಕಡ ೨೫ ಮತ್ತು ಇತರ ಹಿಂದುಳಿದ ವರ್ಗ ಅಲ್ಪಸಂಖ್ಯಾತರಿಗೆ ಶೇಕಡ ೨೫ ರಷ್ಟು ಮೀಸಲಾತಿ ನೀಡಿ ಸರ್ಕಾರ ಆದೇಶ ಹೊರಡಿಸಿದೆಯೇ ?	ಹೌದು
ಆ	ಅಂತಹ ಆದೇಶ ಸಂಖ್ಯೆ ಮತ್ತು ದಿನಾಂಕಯಾವುದು?	ಆದೇಶ ಸಂಖ್ಯೆ ; ಎಸ್ ಡಬ್ಲ್ಯೂಡಿ ೩೪ ಬಿಸಿಎ ೨೦೦೪, ದಿನಾಂಕ ; ೧೦-೦೩-೨೦೦೫
ಇ	ಈ ಆದೇಶವು ಎಂದಿನಿಂದ ಜಾರಿಗೆ ಬಂದಿರುತ್ತದೆ?	ದಿನಾಂಕ : ೧೦-೦೩-೨೦೦೫ ರಿಂದ ಕಾರಿಗೆ ಬಂದಿದೆ.

ಈ	ಸರ್ಕಾರದ ವಿವಿಧ ಇಲಾಖೆಗಳು ಈ ಆದೇಶಗಳನ್ನು ಪಾಲಿಸುತ್ತಿವೆಯೇ ? ಪಾಲಿಸುತ್ತಿಲ್ಲವಾದಲ್ಲಿ, ಅಂತಹ ಇಲಾಖೆಯ ಮೇಲೆ ಕೈಗೊಂಡ ಕ್ರಮವೇನು?	ದಿನಾಂಕ : ೧೦-೦೩-೨೦೦೫ರ ಆದೇಶವನ್ನು ಪಾಲಿಸುವಂತೆ ಸುತ್ತೋಲೆ ಮೂಲಕ ತಿಳಿಸಲಾಗಿದೆ.
ಉ	ಈ ಬಗೆಯ ಸರ್ಕಾರಿ ಖರೀದಿ ಹಾಗೂ ಗುತ್ತಿಗೆಯ ಹಣಕಾಸಿನ ಮಿತಿಯನ್ನು ಒಂದು ರಿಕ್ಷಕ್ಕೆ ಮಿತಿ ಗೊಳಿಸಿರುವುದನ್ನು ಹೆಚ್ಚಿಸಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುವುದು?	ವಿಷಯವು ಪರಿಶೀಲನೆಯಲ್ಲಿದೆ. ಈ ಬಗ್ಗೆ ಲೋಕೋಪಯೋಗಿ ಇಲಾಖೆ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಕಾನೂನು ಇಲಾಖೆ ಹಾಗೂ ಇತರ ಇಲಾಖೆಗಳೊಂದಿಗೆ ಸಮಾಲೋಚಿಸಿ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೬೬೭ (೧೬೯೧)

ಸದಸ್ಯರ ಹೆಸರು : ಶ್ರೀ
ದ್ರುವನಾರಾಯಣ(ಪಂತಾಮರಶ್ರೀ)

ಉತ್ತರಿಸುವ ಸಚಿವರು : ಶ್ರೀ ಬಾಲಚಂದ್ರ ಲ.ಜಾರಕಿಹೊಳಿ
(ಸಮಾಜ ಕಲ್ಯಾಣ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಜನಾಂಗದವರ ಮೇಲೆ	ರಾಜ್ಯದಲ್ಲಿ ಕಳೆದ ೫ ವರ್ಷಗಳಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಜನಾಂಗದವರ ಮೇಲೆ ನಡೆದಿರುವ